ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ನೀರಾವರಿ ಸಚಿವರಿಂದಲೇ ಉತ್ತರ ಕೊಡಿಸುತ್ತೇನೆ.

vi) ವಿಷಯ: ಪೌರ ಕಾರ್ಮಿಕರ ಹೆಸರಿಗೆ ಹಕ್ಕು ಪತ್ರಗಳನ್ನು ನೀಡುವ ಬಗ್ಗೆ.

– 0 –

ಶ್ರೀ ಪಿ.ರಾಜೀವ್(ಕುಡಚಿ): ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಬಳಿ ಶೂನ್ಯ ವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ ಇಷ್ಟೊಂದು ಜನ ಮಂತ್ರಿಗಳು ಖಾಲಿ ಇದ್ದಾರೆ ಅವರೆಲ್ಲಾ ಎಲ್ಲಿ ಹೋದರು?

ಶ್ರೀ ಟಿ.ಬಿ.ಜಯಚಂದ್ರ: ಎಲ್ಲಾ ಇಲ್ಲಿಯೇ ಇದ್ದಾರೆ ಅಧ್ಯಕ್ಷರೆ.

ಶ್ರೀ ಪಿ.ರಾಜೀವ್(ಕುಡಚಿ): ಮಾನ್ಯ ಅಧ್ಯಕ್ಷರೆ, ಬೆಳಗಾವಿ ನಗರದಲ್ಲಿ 1967 ರಿಂದ ಪೌರ ಕಾರ್ಮಿಕರು ವಸತಿ ಗೃಹಗಳಲ್ಲಿ ವಾಸವಾಗಿದ್ದಾರೆ. 1967ರಲ್ಲಿ ಅವರು ಊರಿಂದ ಹೊರಗಡೆ ಇರಬೇಕೆಂದು ಅವರಿಗೆ ಕ್ವಾರ್ಟರ್ಸ್ ಕಟ್ಟಿ ಇಟ್ಟರು. ಆ ಕ್ವಾರ್ಟರ್ಸ್‌ಗಳ ಹಕ್ಕುಪತ್ರವನ್ನು ಅವರ ಹೆಸರಿಗೆ ಕೊಡಿ ಎಂದು 1991 ರಿಂದ ಹೋರಾಟ ಮಾಡುತ್ತಿದ್ದಾರೆ. ಇಲ್ಲಿಯವರೆಗೂ ಆಗಿಲ್ಲ. 2005ರಲ್ಲಿ ನಗರಸಭೆ ಠರಾವನ್ನು ಹಾಕಿದೆ. 2005ರಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. 2006ನೇ ಇಸವಿಯಲ್ಲಿ ಆಡಳಿತಾಧಿಕಾರಿಯವರು ಹಾಗೂ PWD ಯವರು estimate ಮಾಡುತ್ತಾರೆ. ಇಷ್ಟು ಹಣವನ್ನು ಸರ್ಕಾರ ತುಂಬಿಸಿಕೊಂಡು ಅವರಿಗೆ ಹಕ್ಕು ಪತ್ರವನ್ನು ಕೊಡಬಹುದು ಎಂದು ಹೇಳಿದ್ದಾರೆ. ಅದರ ಬಗ್ಗೆ ಕ್ರಮ ಆಗಿಲ್ಲ. 2013ರಲ್ಲಿ ಪ್ರಾದೇಶಿಕ ಆಯುಕ್ತರು ಮತ್ತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಾರೆ. ಇಲ್ಲಿಯವರೆಗೆ ಅವರ ಮಾಲಿಕ ಹಕ್ಕುಪತ್ರವನ್ನು ಕೊಡುತ್ತಿಲ್ಲ. ಅದರ ಹಿನ್ನೆಲೆ ಏನೆಂದರೆ, 1967ರಲ್ಲಿ ಪೌರ ಕಾರ್ಮಿಕರ ವಸತಿ ಊರ ಹೊರಗಡೆ ಇತ್ತು. ಇವತ್ತು ಅದು ನಗರದ ಮಧ್ಯ ಭಾಗ ಆಗುತ್ತಿದೆ. ಅದಕ್ಕೆ ಲ್ಯಾಂಡ್

ಮಾಫಿಯಾದವರು ಕಣ್ಣು ಹಾಕಿದ್ದಾರೆ. ಈ ಕ್ವಾರ್ಟರ್ಸ್‌ಗಳನ್ನು ನೆಲಸಮ ಮಾಡಿದರೆ ನಾವು ಇಲ್ಲಿ ಹೊಸ ಪ್ರಾಜೆಕ್ಟ್‌ಗಳನ್ನು ಮಾಡಬಹುದು ಎಂದಿದ್ದಾರೆ. ಅಧಿಕಾರಿಗಳು ಮಾನ್ಯ ಸಚಿವರು ಹಾಗೂ ಮಾನ್ಯ ಸರ್ಕಾರಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಅವರು ರಿಟೈರ್ಡ್ ಆದ ತಕ್ಷಣ ಅವರನ್ನು ಕ್ವಾರ್ಟರ್ಸ್‌ನಿಂದ ಹೊರ ಹಾಕಬೇಕು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಹೆಸರಿಗೆ ಮಾಡಬೇಕು. ಮೈಸೂರು, ಹುಬ್ಬಳ್ಳಿ ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇದೇ ರೀತಿ ಪೌರ ಕಾರ್ಮಿಕರಿಗೆ ವಸತಿ ಗೃಹಗಳ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ತಾವು ಸರ್ಕಾರದಿಂದ ಆದೇಶ ಹೊರಡಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿನಯಕುಮಾರ ಸೊರಕೆ(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಚಾರದ ಅಡಿಯಲ್ಲಿ ನಿಯಮಾವಳಿ ಪ್ರಕಾರ ನಿವೃತ್ತರಾದರೆ ತೆರವುಗೊಳಿಸಬೇಕೆಂದು ನಿಯಮ ಇದೆ. ಇದು ಪೌರ ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರವಾದ ಕಾರಣ ಸರ್ಕಾರ ಕೂಡ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುತ್ತದೆ. ಬೆಳಗಾವಿ ಮಹಾನಗರಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಸೇವಾನಿರತ ಪೌರ ಕಾರ್ಮಿಕರು ಪಾಲಿಕೆಯ ವಸತಿಗೃಹಗಳಲ್ಲಿ ವಾಸಮಾಡುತ್ತಿದ್ದಾರೆ. ಆದರೆ ಇನ್ನೂ ಕೆಲವರು ನಿವೃತ್ತಿಯಾದ ನಂತರವೂ ವಸತಿಗೃಹಗಳಲ್ಲಿ ವಾಸಿಸುತ್ತಿದ್ದು, ಅವರುಗಳಿಗೆ ವಸತಿಗೃಹಗಳನ್ನು ತೆರವುಗೊಳಿಸಲು ಸೂಚಿಸಲಾಗಿದೆ. ನಿವೃತ್ತಿ ಆದ ನಂತರ ಯಾವುದೇ ಸರ್ಕಾರಿ ನೌಕರರು ನಿಯಮಾವಳಿಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ಸರ್ಕಾರಿ ವಸತಿಗೃಹಗಳಲ್ಲಿ ವಾಸವಾಗಿರಲು ನಿಯಮಗಳಲ್ಲಿ ತೆರವುಗೊಳಿಸುವಂತೆ ನೋಟೀಸುಗಳನ್ನು ಜಾರಿಗೊಳಿಸಿದ್ದರೂ ಸಹ ವಸತಿಗೃಹಗಳನ್ನು ತೆರವುಗೊಳಿಸಿರುವುದಿಲ್ಲ. ಬೆದರಿಕೆ ಮೂಲಕ ಹೊರಹಾಕುವ ಪ್ರಯತ್ನ ನಡೆದಿದೆ ಎಂಬುದು ತಪ್ಪು ಮಾಹಿತಿಯಾಗಿರುತ್ತದೆ. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಹಾಗೂ ಆಯುಕ್ತರು, ಮಹಾನಗರಪಾಲಿಕೆ, ಬೆಳಗಾವಿ ಇವರು ಈಗ ವಾಸವಿರುವ ಪೌರಕಾರ್ಮಿಕರಿಗೆ ವಸತಿಗೃಹ

ಮಂಜೂರಾತಿ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದಲ್ಲಿ ಈ ಕುರಿತು ಪರಿಶೀಲನೆಯಲ್ಲಿರುತ್ತದೆ.

ಶ್ರೀ ಪಿ.ರಾಜೀವ್: ಮಾನ್ಯ ಸಚಿವರೇ, ಈ ರೀತಿ ಉತ್ತರದಿಂದ ಅವರಿಗೆ ನ್ಯಾಯ ಸಿಗುವುದಿಲ್ಲ. ನಿಮಗೆ ಸ್ಪಷ್ಟವಾದ ಉದಾಹರಣೆಗಳು ಇವೆ. ತುಮಕೂರಿನಲ್ಲಿ ಮಾಡಿದ್ದಾರೆ, ಮೈಸೂರಿನಲ್ಲಿ ಮಾಡಿದ್ದಾರೆ, ಹುಬ್ಬಳ್ಳಿ ಧಾರವಾಡದಲ್ಲಿ ಮಾಡಿದ್ದಾರೆ. ಮಲವನ್ನು ಅಕ್ಷರಶಃ ತಲೆಯ ಮೇಲೆ ಹೊತ್ತು ಸೇವೆ ಮಾಡಿದವರನ್ನು ಈ ಸದನ ಅಷ್ಟು ಅಗೌರವಾಗಿ ನಡೆಸಿಕೊಳ್ಳಬಾರದು. ಅವರು ಮಲವನ್ನು ಮೈ ಮೇಲೆ ಚೆಲ್ಲಿಕೊಂಡು ನಾವು ಪ್ರತಿಭಟನೆ ಮಾಡುತ್ತೇವೆಂದು ನಿಂತಿದ್ದರು. ಅವರಿಗೆ ಶಾಂತಿ ಇಟ್ಟು ನಾನು ಇಲ್ಲಿಗೆ ಬಂದಿದ್ದೇನೆ. ಸರ್ಕಾರ ಆ ಮುಜುಗರಕ್ಕೆ ಒಳಗಾಗಬಾರದು.

ಶ್ರೀ ವಿನಯ ಕುಮಾರ್ ಸೊರಕೆ: ಮಾನ್ಯ ಅಧ್ಯಕ್ಷರೆ, ಪೌರ ಕಾರ್ಮಿಕರ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಬೇರೆ ಬೇರೆ ಮಹಾನಗರ ಪಾಲಿಕೆಗಳಲ್ಲಿ ಇಂತಹ ಪೌರ ಕಾರ್ಮಿಕರ ಬಗ್ಗೆ ಇಂತಹ ತೀರ್ಮಾನಗಳು ಆಗಿವೆ ಎನ್ನುವುದರ ಬಗ್ಗೆ ಹೇಳಿದರು. ಇಲ್ಲಿ ಬೆಳಗಾವಿಯಲ್ಲಿಯೂ ಕೂಡ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿಕೊಂಡು ಕ್ರಮ ಕೈಗೊಳ್ಳುತ್ತೇವೆ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ಬೆಂಗಳೂರು ಮಹಾಲಕ್ಷ್ಮಿ ವಿಧಾನಸಭಾ ಕ್ಷೇತ್ರದ ಭೋವಿ ಪಾಳ್ಯದಲ್ಲಿನ ವಿಚಾರ....

ಅಧ್ಯಕ್ಷರು: ಇದು ಬರುವುದಿಲ್ಲ. ಅದನ್ನು ಪ್ರತ್ಯೇಕವಾಗಿ ಕೇಳಿ. ಬೇರೆ ಸಂದರ್ಭದಲ್ಲಿ ಬೇರೆ ರೂಪದಲ್ಲಿ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಈ ತರಹ ಸಂದರ್ಭ ಆದಾಗ ಸವಣೂರಿನಲ್ಲಿ ಕೂಡಲೇ ಅವರಿಗೆ ಮನೆಯನ್ನು ಕಟ್ಟಿಕೊಟ್ಟು ಅವರಿಗೆ ನೌಕರಿಯನ್ನು ಖಾಯಂ ಮಾಡಿಸಿ ಕೊಟ್ಟಿದ್ದು ಸರ್ಕರದಲ್ಲಿ ಈಗಾಗಲೇ ಕಾನೂನು ತಿದ್ದುಪಡಿಯನ್ನು ಕೂಡ ಮಾಡಿದೆ. ಬೇರೆಯವರಿಗೆ ಹೇಗೆ

ಮಾಡಿದ್ದೀರಿ ಹಾಗೆ ಮಾಡಿ ಕೊಡಿ ಅಷ್ಟೇ. ಸಹಾನುಭೂತಿ ಅಲ್ಲ ನಿಮ್ಮ ಕರ್ತವ್ಯ ನಿಷ್ಠೆ ಬೇಕು ಇದಕ್ಕೆ ಅಷ್ಟೇ.

ಶ್ರೀ ಸಿ.ಟಿ.ರವಿ: ಇಡೀ ರಾಜ್ಯಕ್ಕೆ ಸಂಬಂಧಪಡುವ ಹಾಗೆ ತೀರ್ಮಾನ ತೆಗೆದುಕೊಳ್ಳಬೇಕು. ಕೇವಲ ಬೆಳಗಾಂ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲ. ಯೂನಿಫಾರಂ ಆಗಿ ಇಡೀ ರಾಜ್ಯಕ್ಕೆ ಅಪ್ಲೈ ಆಗಬೇಕು.

ಅಧ್ಯಕ್ಷರು: ಉದಾಹರಣೆ ಇದೆ ಮಾಡಿ.

ಒಬ್ಬ ಮಾನ್ಯ ಸದಸ್ಯರು: ಹಕ್ಕು ಪತ್ರ ವಿಚಾರಕ್ಕೆ ಸಂಬಂಧ ಪಟ್ಟ ಹಾಗೆ ಸುಮಾರು ನಲವತ್ತು ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ.

ಅಧ್ಯಕ್ಷರು: ಅದು ಬರುವುದಿಲ್ಲ ನೀವು ಬೇರೆ ರೂಪದಲ್ಲಿ ಕೇಳಿ. ಇರಬಹುದು ಪ್ರತ್ಯೇಕವಾಗಿ ಕೇಳಿ ಉತ್ತರ ಕೊಡುತ್ತಾರೆ. ಚೌಹಾಣ್‌ರವರೇ ಕೇಳಿ.

vii) ವಿಷಯ: ಪಡಿತರ ಚೀಟಿಯನ್ನು ವಿತರಿಸುವ ಬಗ್ಗೆ.

– 0 –

ಶ್ರೀ ಪ್ರಭು ಚೌಹಾಣ್: ನನ್ನ ಮತಕ್ಷೇತ್ರದಲ್ಲಿ ಪಡಿತರ ಚೀಟಿ ವಿಚಾರ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಪಡಿತರ ಚೀಟಿಗಳನ್ನು ಶರ್ಟಿನ ಮೇಲೆ ಅಂಟಿಸಿಕೊಳ್ಳುವುದರ ಮೂಲಕ ಸದನದಲ್ಲಿ ಪ್ರದರ್ಶಿಸಿದರು)

ಅಧ್ಯಕ್ಷರು: ಚೌಹಾಣ್‌ರವರೇ ನೀವು ಸದನದಲ್ಲಿ ಆ ತರಹ ಪಡಿತರ ಚೀಟಿಗಳನ್ನು ಅಂಟಿಸಿಕೊಂಡು ಬರಬಾರದು. ನೀವು ಸದನದ ಸದಸ್ಯರು. ಸದಸ್ಯರ ರೂಪದಲ್ಲಿ ಬರಬೇಕು. ಅದನ್ನು ನೀವು ತೆಗೆಯಬೇಕು. ದಯವಿಟ್ಟು ಪೂರ್ಣವಾಗಿ ತೆಗೆಯಿರಿ.

ಶ್ರೀ ಪ್ರಭು ಚೌಹಾಣ್: ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಪಡಿತರ ಚೀಟಿ ಸಮಸ್ಯೆ ಬಹಳ ಇದೆ. ಒಟ್ಟು 80,000ಕ್ಕೂ ಮೇಲ್ಪಟ್ಟು ಪಡಿತರ